**QP CODE: 42201**

# ದ್ವಿತೀಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಮೇ / ಜೂನ್ 2025

## (SEP 2024ರ ಸ್ಕೀಂ)

## ಕನ್ನಡ ಭಾಷಾ ಪತ್ರಿಕೆ - ೨

## (SCB 0010) ವಾಣಿಜ್ಯ ಸೌರಭ - ೨

ಅವಧಿ : 3 ಗಂಟೆಗಳು　　　　　　　　　　ಗರಿಷ್ಠ ಅಂಕಗಳು : 80

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ಪ್ರಶ್ನೆ ಪತ್ರಿಕೆಯ ಮೇಲೆ (ನೊಂದಣಿ ಸಂಖ್ಯೆ ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

1. ಅ) ಆರು ಪ್ರಶ್ನೆಗಳಿಗೆ ಮೂರು - ನಾಲ್ಕು ಸಾಲುಗಳಲ್ಲಿ ಉತ್ತರಿಸಿರಿ. **(6x2=12)**

   1. ರಹಮತ್ ತರೀಕೆರೆಯವರು ತಮ್ಮ ಬಾಳ ಕಥನವನ್ನು ಕುಲುಮೆಗೆ ಏಕೆ ಹೋಲಿಸಿದ್ದಾರೆ?
   2. ಸಾಮಾನ್ಯವಾಗಿ ಹಾಸ್ಟೆಲ್‌ಗಳಲ್ಲಿ ಕಂಡು ಬರುವ ಮೂಲಭೂತ ಸಮಸ್ಯೆಗಳೇನು?
   3. ಲೇಖಕರು ಬಾಡಿಗೆ ಮನೆಯನ್ನು ತಕ್ಷಣವೇ ಬದಲಾಯಿಸಲು ಕಾರಣಗಳೇನು?
   4. ‘ಸೂಫಿ’ ಪಂಥದ ಮೂರು ಘಟ್ಟಗಳಾವುವು?
   5. ‘ಜೀವಾತ್ಮ’ವನ್ನು ಕುರಿತು ಮೋನಪ್ಪಯ್ಯನ ಚಿಂತನೆಯೇನು?
   6. ಪೋಲಿಸರಿದ್ದಾರೆ ಎಚ್ಚರಿಕೆ ನಾಟಕದಲ್ಲಿ ‘ರಂಗಣ್ಣ’ನ ಪಾತ್ರದ ವಿಶೇಷತೆ ತಿಳಿಸಿ.
   7. ರುದ್ರಪ್ಪನಿಗೆ ಖಡ್ಗದ ಮೇಲೆ ವ್ಯಾಮೋಹ ಉಂಟಾಗಲು ಕಾರಣಗಳೇನು?
   8. ಕರುಂಪಳಿ ಏರಿಯಾದ ಕಪ್ಪು ದೇವತೆಯರ ವಿಶೇಷತೆ ತಿಳಿಸಿ.

   ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. **(8x½=04)**

   1) ಭವ 2) ದೃಷ್ಟಾಂತ 3) ಒಡಪು 4) ಕಬರು 5) ಗೋರಿ 6) ಶಿಖೆ 7) ಥಟ್ಟು 8) ಸೂನು 9) ವಾಯಿ 10) ಕರಿ 11) ನೆತ್ತರು 12) ಕುರುಹು

2. ನಾಲ್ಕು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(4x3=12)**

   1. ಕನಕದಾಸ 2. ಪಿ. ಲಂಕೇಶ್ 3. ನಿಂಗಜ್ಜಿ 4. ತಲೆಯಪ್ಪದೇವರು 5. ಸಂಸ 6. ತಿಂತಿಣಿ ಮೋನಪ್ಪಯ್ಯ

3. ನಾಲ್ಕನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4x3=12)**

   1. ತಾಯೆ ಬಾ ಗಾಂಧಾರಿ ಮನದಲಿ ನೋಯದಿರು.
   2. ಭಾನುದತ್ತನ ಮೇಲೆ ಹೊರಳುವ ಮಾನಿನಿಯರ ನಿರೀಕ್ಷಿಸೈ
   3. ಹಸು ಮಗುವಿನ ಸುತ್ತ ಹಸಿದ ನಾಯಿ ಕುಸಿದ ಜೀವ.
   4. ಯಾವ ದಡದಲ್ಲಾದರೂ ನಿನ್ನ ಹೆಜ್ಜೆ ಸೋಕದ ಸ್ಥಳವಿದ್ದರೆ ಕೂತು ಕುಣಿದುಬಿಡುವೆ.
   5. ಅಣ್ಣನ ನೆನಪು ಕೂಡ ಇಲ್ಲ ಅಂದುಬಿಟ್ಟೆಯ ರುದ್ರು !
   6. ಹೆಂಡ್ತಿ ಅಂದ್ರೆ ಹೆಂಡ್ತಿ ಸಾರ್, ಸ್ನೇಹಿತರು ಹೆಂಡ್ತಿ ಥರ ಇರೋಕೆ ಸಾಧ್ಯವೇ?

QP CODE: 42201

4. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4x5=20)

1. 'ರಾಜಧಾನಿ' ಪದ್ಯದ ಆಶಯವನ್ನು ಕುರಿತು ಬರೆಯಿರಿ.
2. 'ಒಂದೇ ಒಂದು ಕಪ್ ಕಾಫಿ' ಕವಿತೆಯ ಸ್ವಾರಸ್ಯವನ್ನು ತಿಳಿಸಿ.
3. 'ತೊರೆದು ಜೀವಿಸಬಹುದೆ' ಕೀರ್ತನೆಯಲ್ಲಿ ಹರಿಭಕ್ತಿ ಹೇಗೆ ನಿವೇದನೆಗೊಂಡಿದೆ ವಿವರಿಸಿ.
4. ಉತ್ಸವವೂ, ಹುಸಿಪಾಠಕರೂ ಕವಿತೆಯ ಸಾರಾಂಶ ಬರೆಯಿರಿ.
5. ಮಣ್ಣಿನ ವೈಶಿಷ್ಟ್ಯತೆ ಮತ್ತು ಹಿರಿಮೆ ಕುರಿತು 'ಇದು ಬರಿ ಮಣ್ಣಲ್ಲ' ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.
6. ಹೆಣ್ಣೊಬ್ಬಳ ಅಂತರಂಗದ ತಳಮಳವು 'ಕಪ್ಪು ಚುಕ್ಕಿಯ ಹಾಡು' ಕವಿತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ?

5. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿರಿ. (2x10=20)

1. ಮಂಜಮ್ಮ ಜೋಗತಿ ಅವರ ಬದುಕು ಮತ್ತು ಸಾಧನೆಗಳನ್ನು ಕುರಿತು ವಿವರಿಸಿ.
2. 'ಯುದ್ಧ' ಎಂಬುದು ಜೀವ ವಿನಾಶ ಮತ್ತು ಭೀಕರವಾದುದು ಈ ಹೇಳಿಕೆಯನ್ನು 'ಗಾಂಧಾರಿ ಪ್ರಲಾಪ' ಕಾವ್ಯಭಾಗದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
3. ಒಬ್ಬ ಶ್ರೇಷ್ಠ ನಾಟಕಕಾರರ ಬದುಕು ದುರಂತಗೊಂಡಿದ್ದನ್ನು 'ಪೋಲಿಸರಿದ್ದಾರೆ ಎಚ್ಚರಿಕೆ' ನಾಟಕದಲ್ಲಿ ಲೇಖಕರು ಹೇಗೆ ಅನಾವರಣಗೊಳಿಸಿದ್ದಾರೆ ? ವಿವರಿಸಿ.

* * *